74(142) ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ವನ್ನು ಅಂತರ ರಾಷ್ಟ್ರೀಯ ಮಟ್ಟಕ್ಕೆ ಏರಿಸಲು ಸರ್ಕಾರ ಕೈಗೊಂಡ ಕಾರ್ಯಕ್ರಮಗಳೇನು;

ಆ) ಇದಕ್ಕಾಗಿ ಖರ್ಚು ಮಾಡಿದ ಹಾಗೂ ಮಾಡಲಿರುವ ಹಣವೆಷ್ಟು;

ಇ) ಇದಕ್ಕಾಗಿ ಕೇಂದ್ರ ಸರ್ಕಾರದಿಂದ ಬಂದ ನೆರವೆಷ್ಟು ;

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಸರ್ಕಾರವು ಆದೇಶ ಸಂಖ್ಯೆ: ಅಪಜೀ. 252 ಎಫ್ ಡಬ್ಲ್ಯೂಎಲ್ 2000 ದಿನಾಂಕ: 20-07-2002 ರಲ್ಲಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಮೃಗಾಲಯ ಭಾಗವನ್ನು ಬೇರ್ಪಡಿಸಿ ಬನ್ನೇರುಘಟ್ಟ ಬಯೋಲಾಜಿಕಲ್ ಪಾರ್ಕ್ ರಚಿಸಲಾಗಿದೆ ಹಾಗೂ ಇದನ್ನು ಕರ್ನಾಟಕ ಮೃಗಾಲಯ ಪ್ರಾಧಿಕಾರದ ವ್ಯಾಪ್ತಿಗೆ ತರಲಾಗಿದೆ. ಈ ಬಯೋಲಾಜಿಕಲ್ ಪಾರ್ಕ್ ಬೆಂಗಳೂರಿಗೆ ಅತಿ ಸಮೀಪದಲ್ಲಿದ್ದು ಪ್ರವಾಸಿಗರನ್ನು ಆಕರ್ಷಿಸುವ ಸ್ಥಳವಾಗಿರುತ್ತದೆ.

ಪರಿಸರ ಹಾಗೂ ಪ್ರಾಣಿಗಳ ಸಂರಕ್ಷಣೆ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಮತ್ತು ಉತ್ತಮ ಸೌಕರ್ಯಗಳನ್ನು ಒದಗಿಸುವ ಮತ್ತು ಅಂತರಾಷ್ಟ್ರೀಯ ಮಟ್ಟಕ್ಕೆ ಈ ಬಯೋಲಾಜಿಕಲ್ ಪಾರ್ಕ್‌ನ್ನು ಏರಿಸಲು ರೂ. 20 ಕೋಟಿಗಳ ಯೋಜನೆಯನ್ನು ಸರ್ಕಾರವು ಅನುಮೋದನೆ ಮಾಡಿರುತ್ತದೆ. ಇದರಲ್ಲಿ ಚಿಟ್ಟೆವನ ನಿರ್ಮಾಣ, ಮೃಗಾಲಯ ಅಭಿವೃದ್ಧಿ ವಾಹನ ನಿಲ್ದಾಣ ಅಭಿವೃದ್ಧಿ ಇತ್ಯಾದಿಗಳು ಸೇರಿರುತ್ತವೆ.

ಆ) ಈವರೆಗೆ ಈ ಯೋಜನೆಯಲ್ಲಿ ರೂ.114 ಲಕ್ಷಗಳನ್ನು ಖರ್ಚು ಮಾಡಲಾಗಿರುತ್ತದೆ. ಉಳಿಕೆ ಹಣವನ್ನು ಸರ್ಕಾರವು ಮುಂದೆ ಬಿಡುಗಡೆ ಮಾಡಿದ ನಂತರ ಹಂತವಾಗಿ ಕರ್ಚುಮಾಡಲಾಗುವುದು.

ಇ) ಈ ಯೋಜನೆಗಾಗಿ ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಇಲಾಖೆಯು ರೂ. 4.10 ಕೋಟಿಗಳನ್ನು ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಗೆ ಬಿಡುಗಡೆ ಮಾಡಿತುತ್ತದೆ ಮತ್ತು ರೂ. 1.86 ಕೋಟಿಗಳನ್ನು ಕೇಂದ್ರ ಸರ್ಕಾರ ಜೈವಿಕ ತಂತ್ರಜ್ಞಾನ ಇಲಾಖೆ "ಡಿ.ಬಿ.ಟಿ." ಕರ್ನಾಟಕ ಮೃಗಾಲಯ ಪ್ರಾಧಿಕಾರಕ್ಕೆ ಬಿಡುಗಡೆ ಮಾಡಿರುತ್ತದೆ.

77(573) ಶ್ರೀ. ಕೆ.ಎಸ್.ಕಿರಣ್ ಕುಮಾರ್(ಕಳ್ಳಂ ಬೆಳ್ಳ) ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆ, ಶಿರಾ ತಾಲ್ಲೂಕಿನ ಕಳ್ಳಂಬೆಳ್ಳ ವಿಧಾನಸಭಾ ಕ್ಷೇತ್ರ(ಹೋಬಳಿ) ವ್ಯಾಪ್ತಿಯ ಜೋಡಿದೇವರಪಳ್ಳಿಯಲ್ಲಿರುವ ಸರ್ವೆ ನಂ 24 ಮತ್ತು 33ರ 60 ಎಕರೆ ಜಾಗವು ಅಕ್ರಮವಾಗಿ ಖಾಸಗಿಯವರಿಗೆ ಮಾರಾಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಜಾಗ ಮೋದಲು ಯಾರ ಸ್ವಾಧೀನದಲ್ಲಿತ್ತು.

ಇ) ಸದರಿ ಜಾಗವನ್ನು ಯಾರಿಗೆ ಯಾವ ಉದ್ದೇಶಕ್ಕಾಗಿ ಮಾರಾಟ ಮಾಡಲಾಗಿದೆ(ವಿವರ ನೀಡುವುದು)

ಈ) ಇದರಿಂದ ಈ ಸರ್ವೆ ನಂಬರುಗಳಲ್ಲಿನ ಆ ಭಾಗದ ರೈತರಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೇ ;

ಉ) ಇದು ಈ ಹಿಂದೆ ಇತರೆ 11 ಮಂದಿಗೆ ಮಂಜೂರಾಗಿದ್ದು ನಿಜವೇ;

ಊ) ಹಾಗಿದ್ದಲ್ಲಿ ಪರಭಾರೆ ಮಾಡಿ ಸ್ಥಳದಲ್ಲಿ ವಾಸವಾಗಿಲ್ಲವೆಂದು ಪರದಿ ನೀಡಿ ಸರ್ಕಾರ ಮನಃ ಭೂಮಿಯನ್ನು (ಮಂಜೂರಾತಿ ರದ್ದುಪಡಿಸಿ) ವಶಪಡಿಸಿಕೊಂಡ ನಂತರವೂ ಅಕ್ರಮವಾಗಿ ಭೂ ಪರಿವರ್ತನೆ ಮಾಡಿಸಿಕೊಂಡು ವಾಸಕ್ಕೆ ಕಂಪನಿಯಾದ ಸನ್ ಏಕ್ ಸ್ಟೀಲ್ ಪ್ರೈ.ಲಿ.ಗೆ ಮಾರಾಟ ಮಾಡಿರುವುದು ಸರಿಯೇ ಇದಕ್ಕೆ ಕಾರಣರಾರು ಹಾಗೂ ಅವರ ಮೇಲೆ ಕೈಗೊಂಡ ಕ್ರಮವೇನು.

ಶ್ರೀ.ಎಂ.ಪಿ. ಪ್ರಕಾಶ್(ಕಂದಾಯ ಸಚಿವರು) :

ಅ) ಮಾರಾಟ ಸಕ್ರಮ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಏನಾ ಅಕ್ರಮ ಮಾರಾಟ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಸದರಿ ಜಾಗವನ್ನು ಸನ್ ಏಕ್ ಕಾರ್ಖಾನೆಗೆ ವ್ಯವಸಾಯೇತರ ಉದ್ದೇಶಕ್ಕಾಗಿ ಮಾರಾಟ ಮಾಡಲಾಗಿದೆ.

ಈ) ಸುತ್ತಮುತ್ತಲಿನ ಗ್ರಾಮಸ್ಥರಿಗೆ ಏಕ್ ಕಾರ್ಖಾನೆಯಿಂದ ಬರುವ ಹೊಗೆಯಿಂದ ಪರಿಸರ ಮಾಲಿನ್ಯ ಮತ್ತು ಬೆಳೆ ನಾಶವಾಗುವ ಸಂಭವವಿರುತ್ತದೆಂದು ಕಂಡುಬಂದಿದೆ.

ಉ) ಹೌದು

ಊ) 1978.79ನೇ ಸಾಲಿನಲ್ಲಿ ಜೋಡಿದೇವರಹಳ್ಳಿ ಸ.ನಂ.33ರಲ್ಲಿಎಕರೆಯಂತೆ ಮತ ಉಳಿದ 9 ಜನರಿಗೆ ತಲಾ 4.00 ಎಕರೆಯಂತೆ ಮತ ಉಳಿದ 9 ಜನರಿಗೆ ತಲಾ 4.38 ಜಮೀನು ದರಖಾಸ್ತು ಮೂಲಕ ಮಂಜೂರಾಗಿದ್ದು ಈ ಮಧ್ಯದಲ್ಲಿ ಕೆಲವರ ಮಂಜೂರಾತಿಯನ್ನು ತಹಸೀಲ್ದಾರ್ ರವರೇ ವಜಾಗೊಳಿಸಿದ್ದುವರ ಬಗ್ಗೆ ಉಪವಿಭಾಗಾಧಿಕಾರಿಗಳು ಮಧುಗಿರಿರವರ ದಿ: 19.10.92ರ ಮೇಲ್ಮನವಿ ಆದೇಶದಲ್ಲಿ ತಹಸೀಲ್ದಾರ್ ರವರ ಆದೇಶವನ್ನು ರದ್ದುಪಡಿಸಿರುತ್ತಾರೆ. ಮೂಲ ಮಂಜೂರಾತಿಯನ್ನು ದೃಢೀಕರಿಸಿರುತ್ತಾರೆ. ಈ ಪೈಕಿ ಇಬ್ಬರು ಒಟ್ಟು 9.36 ಗುಂಟೆಯನ್ನು ಉಪವಿಭಾಗಾಧಿಕಾರಿಗಳಿಂದ ವ್ಯವಸಾಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆ ಆದೇಶ ಪಡೆದು ದಿ: 1.11.03 ರಂದು ನೋಂದಣಿ ಸಂಖ್ಯೆ 2091 ಮತ್ತು 2092/03.04 ರಲ್ಲಿ ಸನ್ ಏಕ್ ಸ್ಟೀಲ್ ವ್ಯವಸ್ಥಾಪಕ ನಿದೇಶಕರಾದ ಕೌಜಿ ಅವಾಲಾರವರಿಗೆ ಕ್ರಯ ಕ್ರಯಕ್ಕೆ ಕೊಟ್ಟಿರುತ್ತಾರೆ. ನಂತರ 9 ಜನ ಮಂಜೂರಿದಾರರ ಪೈಕಿ 8 ಜನರು ತಲಾ 4.38 ಗುಂಟೆಯಂತೆ ಒಟ್ಟು 39.24 ಗುಂಟೆಯನ್ನು ಎಂ.ಎಂ.ಮೂಣಾಚ್ಚಿ ಜಿನ್ ಎಂ.ಮುತ್ತಣ್ಣ ಇವರಿಗೆ ದಿ:5.9.03 ಮತ್ತು 11.9.03 ರಂದು ನೊಂದಣಿ ಸಂಖ್ಯೆ ಕ್ರಮವಾಗಿ 1445 ರಿಂದ 1448; 03.04 ಮತ್ತು 1503 ರಿಂದ 1506:03.04ರ ಮೇರೆಗೆ ಶುದ್ದ ಕ್ರಯಕ್ಕೆ ಕೊಟ್ಟಿರುತ್ತಾರೆ. ಕ್ರಯದಾರರಿಗೆ ನಿಯಮಾನುಸಾರ ಖಾತೆ ಪಹಣಿ ಬದಲಾವಣೆಯಾಗಿರುತ್ತದೆ. ಈ ಮಧ್ಯದಲ್ಲಿ ಸನ್ ಏಕ್ ಸ್ಟೀಲ್ ಪ್ರೈ.ಲಿ.ರವರು ಸ್ಟೀಲ್ ಕಾರ್ಖಾನೆ ಸ್ಥಾಪಿಸಿದ್ದು ಕಾರ್ಖಾನೆ ಸುತ್ತಲಿನ ಸುಮಾರು

8–10 ಕಿ.ಮೀ.ದೂರದವರೆಗೂ ಬೆಳೆಹಾನಿ ಯಾಗುವ ಸಂಭವವಿರುವುದರ ಮೇರೆಗೆ ಉಪ ವಿಭಾಗಾಧಿಕಾರಿಗಳ ಆದೇಶ ಸಂಖ್ಯೆ ಎಂ.ಎ.ಜೆ.ಸಿ.ಆರ್. 29/04.05 ದಿ: 12.10.04 ರಂತೆ ಕಾರ್ಯಾನೆಯ ಉತ್ಪಾದನಾ ಕಾರ್ಯವನ್ನು ನಿಲ್ಲಿಸಲು ಆದೇಶಿಸಿದ್ದು ಈ ಆದೇಶಕ್ಕೆ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್‌ಪಿಟಿಷನ್ ನಂ. 1550/04 ರಂತೆ ತಡೆಯಾಜ್ಞೆ ಬಂದಿರುತ್ತೆ.

78(592) ಶ್ರೀ ಕೃಷ್ಣ ಪಾಲೇಮಾರ್ ಜೆ.(ಸುರತ್ಕಲ್) ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಇರುವ ಜಿಲ್ಲಾ ಮತ್ತು ತಾಲ್ಲೂಕು ಕ್ರೀಡಾಂಗಣಗಳೆಷ್ಟು :

ಆ) ಅಪೂರ್ಣ ಹಾಗೂ ಪೂರ್ಣಗೊಂಡ ಕ್ರೀಡಾಂಗಣಗಳೆಷ್ಟು;

ಇ) ಅಪೂರ್ಣಗೊಂಡವುಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವಲ್ಲಿ ಸರಕಾರದ ಕ್ರಮಗಳೇನು ;

ಶ್ರೀ ಜಬ್ಬರ್‌ಖಾನ್ ಹೊನ್ನಳ್ಳಿ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು):

ಅ) ಜಿಲ್ಲಾ ಕ್ರೀಡಾಂಗಣಗಳು – 25

ತಾಲ್ಲೂಕು ಕ್ರೀಡಾಂಗಣಗಳು – 102

ಆ) **ಅಪೂರ್ಣ ಹಂತದಲ್ಲಿರುವ ಕ್ರೀಡಾಂಗಣಗಳು :**

ಜಿಲ್ಲಾ ಕ್ರೀಡಾಂಗಣಗಳು – 6

ತಾಲ್ಲೂಕು ಕ್ರೀಡಾಂಗಣಗಳು – 75

ಪೂರ್ಣಗೊಂಡ ಕ್ರೀಡಾಂಗಣಗಳು

ಜಿಲ್ಲಾ ಕ್ರೀಡಾಂಗಣಗಳು – 19

ತಾಲ್ಲೂಕು ಕ್ರೀಡಾಂಗಣಗಳು – 27

ಇ) ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಕ್ರೀಡಾಂಗಣಗಳನ್ನು ಪೂರ್ಣಗೊಳಿಸಲು ಸ್ಥಳೀಯ ಕ್ರೀಡಾಂಗಣ ಸಮಿತಿಗಳು ಸಾರ್ವಜನಿಕ ವಂತಿಕೆ, ಶಾಸಕರ ಮತ್ತು ಸಂಸದರ ನಿಧಿ ಇತ್ಯಾದಿ ಮೂಲಕ ಸಾಕಷ್ಟು ಹಣವನ್ನು ಸಂಗ್ರಹಿಸಬೇಕಾಗಿದೆ. ಕೇಂದ್ರ ಸರ್ಕಾರದ ಹೊಂದಾಣಿಕೆ ಅನುದಾನದ ಯೋಜನೆಯನ್ವಯ ಅನೇಕ ಕ್ರೀಡಾಂಗಣಗಳ ನಿರ್ಮಾಣಕ್ಕೆ ಸಹಾಯವನ್ನು ಪಡೆಯುತ್ತಿದ್ದು, ಜಿಲ್ಲಾ ಪಂಚಾಯತ್ ಆಯವ್ಯಯದಲ್ಲಿ ಕ್ರೀಡೆಗಾಗಿ ಶೇ.2 ರಷ್ಟು ಹಣವನ್ನು ತಮ್ಮ ಆಯವ್ಯಯದಲ್ಲಿ ಮೀಸಲಿಡಲು ತೀರ್ಮಾನಿಸಲಾಗಿದೆ. ಸ್ಥಳೀಯ ಸಂಪನ್ಮೂಲ ಕ್ರೋಢೀಕರಿಸಿ ತಮ್ಮ ಪಾಲಿನ ಜವಾಬ್ದಾರಿಯನ್ನು ನಿರ್ವಹಿಸಿ, ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದಾಗ ಕೇಂದ್ರ ಸರ್ಕಾರದ ಭಾಗದ ಹಣವನ್ನು ನೀಡಲಾಗುತ್ತಿದೆ. ಈ ಎಲ್ಲಾ ಮೂಲಗಳಿಂದ ಕ್ರೋಢೀಕರಿಸಿದ ಹಣದಿಂದ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಕ್ರೀಡಾಂಗಣಗಳ ನಿರ್ಮಾಣಕಾರ್ಯ ಕೈಗೊಳ್ಳಲಾಗುತ್ತಿದೆ.

79(593) ಶ್ರೀ ಕೃಷ್ಣ ಪಾಲೇಮಾರ್. ಜೆ (ಸುರತ್ಕಲ್) ಮಾನ್ಯ ಪ್ರವಾಸೋದ್ಯಮ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಪ್ರವಾಸೋದ್ಯಮ ಯೋಜನೆಯಲ್ಲಿ ಖಾಸಗಿ ಉದ್ಯಮಿಗಳು ಹಣ ಹೂಡಲು ವಿಧಿಸಿರುವ ನಿಯಮಗಳೇನು;